# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 803 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12.12.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಜ್ಞಾನ ಪದವಿ ಪೂರ್ವ/ ಉನ್ನತೀಕರಿಸಿದ/ ಅಟಲ್ ಬಿಹಾರಿ ವಾಜಪೇಯಿ ಕಾಲೇಜುಗಳ ಸಂಖ್ಯೆ ಎಷ್ಟು; ಮತ್ತು ವಿಷಯವಾರು ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು: | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 27 ಪದವಿ ಪೂರ್ವ ವಸತಿ ಕಾಲೇಜು, 16 ಅಟಲ್ ಬಿಹಾರಿ ವಾಜಪೇಯಿ ಶಾಲೆಗಳು, 62 ಉನ್ನತೀಕರಿಸಿದ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br>16 ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಹಾಗೂ 2025-26ನೇ ಸಾಲಿನಲ್ಲಿ 31 ಉನ್ನತೀಕರಿಸಿದ ವಸತಿ ಶಾಲೆಗಳಿಗೆ ಖಾಯಂ ಉಪನ್ಯಾಸಕರ ಹುದ್ದೆಗಳು ಮಂಜೂರಾಗಿರುವುದಿಲ್ಲ. ಉಳಿದ 58 ಕಾಲೇಜುಗಳಿಗೆ ಮಂಜೂರಾಗಿರುವ ವಿಷಯವಾರು ಉಪನ್ಯಾಸಕರ ಹುದ್ದೆಗಳ ವಿವರ ಅನುಬಂಧ-01ರಲ್ಲಿ ನೀಡಲಾಗಿದೆ. |
| ಆ) | ನೇಮಕಾತಿ/ ಪದೋನ್ನತಿಗಾಗಿ ಲಭ್ಯವಾಗಿ ಉಪನ್ಯಾಸಕರ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ಪದವಿ ಪೂರ್ವ ವಸತಿ ಕಾಲೇಜು ಮತ್ತು ಉನ್ನತೀಕರಿಸಿದ ವಸತಿ ಕಾಲೇಜುಗಳಲ್ಲಿ ಮಂಜೂರಾದ ಉಪನ್ಯಾಸಕರ ಹುದ್ದೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-02ರಲ್ಲಿ ನೀಡಲಾಗಿದೆ. |
| ಇ) | ಇದುವರೆಗೂ ನೇಮಕಾತಿ/ ಪದೋನ್ನತಿ ನೀಡದಿರುವ ಉಪನ್ಯಾಸಕರ ಹುದ್ದೆಗಳ ಖಾಲಿ ಇರಲು ಕಾರಣಗಳೇನು; | 2009-10ನೇ ಸಾಲಿನಲ್ಲಿ 26 ಪದವಿ ಪೂರ್ವ ವಸತಿ ಕಾಲೇಜುಗಳನ್ನು ಮಂಜೂರು ಮಾಡಿದ್ದು, ಪ್ರತಿ ಕಾಲೇಜಿಗೆ 7 ಉಪನ್ಯಾಸಕರ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ. 26 ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಮಂಜೂರಾದ 182 ಹುದ್ದೆಗಳನ್ನು ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ.<br>2017-18ನೇ ಸಾಲಿನ ಆಯವ್ಯಯದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ 30 ವಸತಿ ಶಾಲೆಗಳನ್ನು ಕಾಲೇಜುಗಳನ್ನಾಗಿ ಉನ್ನತೀಕರಿಸಲಾಗಿರುತ್ತದೆ. ಈ ಪೈಕಿ, 20 ಉನ್ನತೀಕರಿಸಿದ ಕಾಲೇಜುಗಳಿಗೆ ಪ್ರತಿ ಕಾಲೇಜಿಗೆ 6 ಉಪನ್ಯಾಸಕರ ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ ಹಾಗೂ ಉಳಿದ 10 ಉನ್ನತೀಕರಿಸಿದ ಕಾಲೇಜುಗಳಿಗೆ ಉಪನ್ಯಾಸಕರ ಹುದ್ದೆಗಳನ್ನು ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ-2025ರಲ್ಲಿ ಸೇರ್ಪಡೆ ಮಾಡಿಕೊಂಡು ಸದರಿ ಉಪನ್ಯಾಸಕರ ಹುದ್ದೆಗಳನ್ನು ಶೇ.75 ರಷ್ಟು ಶಿಕ್ಷಕರ ವೃಂದದಿಂದ ಮುಂಬಡ್ತಿ ಮುಖಾಂತರ ಉಳಿದ ಶೇ.25 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರಸ್ತುತ ಶಿಕ್ಷಕರ ವೃಂದದಿಂದ ಖಾಲಿ ಇರುವ 226 ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತು ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಿರ್ಣಯದಂತೆ ನಿಯಮಾನುಸಾರ ಕ್ರಮ ವಹಿಸಲಾಗುವುದು. |

| | | |
|---|---|---|
| ಈ) | ಉಪನ್ಯಾಸಕರ ಹುದ್ದೆಗಳಿಗೆ ಪದೋನ್ನತಿ ಕೊಡಲು ಶಿಕ್ಷಕರಿಂದ CR ಗಳನ್ನು ಏಪ್ರಿಲ್ 2025 ರಲ್ಲಿ ಕರೆದು ಇಲ್ಲಿಯವರೆಗೆ ಪದೋನ್ನತಿ ನೀಡದಿರಲು ಕಾರಣವೇನು; | ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ಪ್ರಕ್ರಿಯೆ ಕೈಗೊಳ್ಳುವ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಿದ್ಯಾರ್ಹತೆಯನ್ನು ಹಾಗೂ ಇತರೆ ದಾಖಲಾತಿಗಳನ್ನು ಪರಿಶೀಲಿಸಿ, ಮುಂಬಡ್ತಿ ಸಮಿತಿಯ ಸಭೆಯನ್ನು ಕರೆಯಲಾಗಿರುತ್ತದೆ.<br>ಆದರೆ, ಮುಂಬಡ್ತಿ ನೀಡಲು ಒಳಮೀಸಲಾತಿ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದ ಹಿನ್ನೆಲೆಯಲ್ಲಿ ಮುಂಬಡ್ತಿ ಪ್ರಕ್ರಿಯೆ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. |
| ಉ) | ಖಾಯಂ ಶಿಕ್ಷಕರು 14 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರೂ, ಒಮ್ಮೆಯು ಉಪನ್ಯಾಸಕರ ಹುದ್ದೆಗೆ ಪದೋನ್ನತಿ ನೀಡದಿರಲು ಕಾರಣಗಳೇನು? | |

ಸಕಇ-ಎಂಡಿಎಸ್/278/2025

(ಡಾ.ಹೆಚ್.ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು

# ಅನುಬಂಧ-1

| SL NO | POST | Sanction | KK Region | | | | RPC POST | | | ಮುಂಬಡ್ತಿಗೆ ಪರಿಗಣಿಸ ಬಹುದಾದ ಹುದ್ದೆಗಳ ಸಂಖ್ಯೆ |
|---|---|---|---|---|---|---|---|---|---|---|
| | | | HK Region sanction POST | HK Reservation (75%A,B, 80% C.C) | Working | vacancy | NHK sanction | working | Vacancy | |
| **1** | **2** | **3** | **4** | **5** | **6** | **7 (5-6)** | **8 (3-5)** | **9** | **10 (4-5)+(8-9)** | **11 (7+10)** |
| 1 | ಕನ್ನಡ ಭಾಷಾ ಉಪನ್ಯಾಕರು | 58 | 11 | 8 | 2 | **6** | 47 | 18 | **32** | **38** |
| 2 | ಆಂಗ್ಲ ಭಾಷಾ ಉಪನ್ಯಾಕರು | 58 | 11 | 8 | 3 | **5** | 47 | 17 | **33** | **38** |
| 3 | ಭೌತಶಾಸ್ತ್ರ ಉಪನ್ಯಾಸಕರು | 58 | 11 | 8 | 3 | **5** | 47 | 20 | **30** | **35** |
| 4 | ರಸಾಯನಶಾಸ್ತ್ರ ಉಪನ್ಯಾಸಕರು | 58 | 11 | 8 | 2 | **6** | 47 | 18 | **32** | **38** |
| 5 | ಗಣಿತ ಉಪನ್ಯಾಸಕರು | 58 | 11 | 8 | 3 | **5** | 47 | 18 | **32** | **37** |
| 6 | ಜೀವಶಾಸ್ತ್ರ ಉಪನ್ಯಾಸಕರು | 58 | 11 | 8 | 3 | **5** | 47 | 20 | **30** | **35** |
| 7 | ಗಣಕಯಂತ್ರ ಉಪನ್ಯಾಸಕರು | 27 | 5 | 4 | 3 | **1** | 22 | 19 | **4** | **5** |
| **ಒಟ್ಟು** | | **375** | **71** | **52** | **19** | **33** | **304** | **130** | **193** | **226** |

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 680(803)ಕ್ಕೆ ಅನುಬಂಧ-01

ಮಂಜೂರಾದ ಉಪನ್ಯಾಸಕರ ಹುದ್ದೆಗಳ ಜಿಲ್ಲಾವಾರು ವಿವರ

| ಕ್ರ.ಸಂ. | ಜಿಲ್ಲೆ | ಮಂಜೂರಾದ ಉಪನ್ಯಾಸಕರ ಹುದ್ದೆಗಳು |
|---|---|---|
| 1 | BAGALKOT | 13 |
| 2 | BELAGAVI | 13 |
| 3 | BENGALURU RURAL | 13 |
| 4 | BENGALURU URBAN | 13 |
| 5 | BIDAR | 6 |
| 6 | CHAMARAJANAGARA | 13 |
| 7 | CHIKKABALLAPURA | 13 |
| 8 | CHIKKAMAGALURU | 13 |
| 9 | CHITRADURGA | 13 |
| 10 | DAKSHINA KANNADA | 6 |
| 11 | DAVANAGERE | 13 |
| 12 | DHARAWADA | 13 |
| 13 | GADAGA | 13 |
| 14 | HASSANA | 13 |
| 15 | HAVERI | 13 |
| 16 | KALABURAGI | 20 |
| 17 | KODAGU | 13 |
| 18 | KOLARA | 13 |
| 19 | KOPPALA | 13 |
| 20 | MANDYA | 13 |
| 21 | MYSURU | 13 |
| 22 | RAICHUR | 13 |
| 23 | RAMANAGARA | 6 |
| 24 | SHIVAMOGGA | 13 |
| 25 | TUMAKURU | 13 |
| 26 | UDUPI | 13 |
| 27 | UTTARA KANNADA | 13 |
| 28 | VIJAYAPURA | 13 |
| 29 | YADAGIRI | 6 |
| 30 | MANDYA | 6 |
| 31 | VIJAYANAGARA | 13 |
| | ಒಟ್ಟು | **375** |